ನಿರ್ಧರಿಸಲು ನನ್ನ ಸಲಹೆ. ಮಾರ್ಗದರ್ಶನ ಕೋರಿದನಲ್ಲ, ನಾವು ರಾತ್ರಿ ತುಂಬಾ ಹೊತ್ತು ಚರ್ಚಿಸಿದೆವು.

ನಿಜವನ್ನು ಧೈರ್ಯವಾಗಿ ಒಪ್ಪಿಕೊಂಡು, ಬಂಡಾಯದ ದಾರಿಯಲ್ಲಿ ನಡೆದರೆ, ಚಂದ್ರ ಏನೆಲ್ಲ ಪರಿಣಾಮಗಳನ್ನು ಎದುರಿಸಬೇಕಾಗಬಹುದು ಎಂಬ ಬಗ್ಗೆ ನಾನು ಅವನಿಗೆ ಪ್ರಸ್ತುತದ ಕಣ್ಣೆದುರಿಗಿನ ಉದಾಹರಣೆಗಳೊಂದಿಗೆ ತಿಳಿ ಹೇಳಿದೆ. 'ಇದನ್ನೆಲ್ಲ ಎದುರಿಸಿ ಒಬ್ಬಂಟಿಯಾಗಿ ಹೋರಾಡುವ ಸಂಕಲ್ಪ, ತಾಕತ್ತು ನಿನಗಿದೆಯೆ?' ಎಂದು ಕೇಳಿದೆ. 'ಸಹನೆ, ಜಾಣತನ, ವಿವೇಚನೆಯಿಂದ ವರ್ತಿಸು' ಎಂದೆ. ಅವನು ಪೆಚ್ಚಾಗಿ, ಭ್ರಮ ನಿರಸಿತನಾಗಿ, ಒಂದು ರೀತಿಯ ನಾಚಿಕೆಯನ್ನು ಮುಖದ ಮೇಲೆ ಹೊತ್ತು ಹಿಂತಿರುಗಿದ. ತನ್ನ ಹುಟ್ಟಿನ ಗುಟ್ಟನ್ನು ಅವನು ಇನ್ನಾರಿಗೂ – ಕೊನೆಗೆ ತನ್ನ ಪ್ರೇಯಸಿ ಜಾನಕಿಗೂ ಬಿಟ್ಟು ಕೊಡಲಿಲ್ಲ. ಬ್ಯಾಂಕಿನ ತನ್ನ ನೌಕರಿಗೂ ರಾಜೀನಾಮೆಯನ್ನೂ ಕೊಡಲಿಲ್ಲ.

ಈಗ ಚಂದ್ರ ಜಾನಕಿ ಮದುವೆಯಾಗಿ ಹಲವು ವರ್ಷಗಳೇ ಕಳೆದಿವೆ. ಬೆಂಗಳೂರಿನ ಜಯನಗರದಲ್ಲಿ ಸ್ವಂತ ಸುಸಜ್ಜಿತ ಬಂಗಲೆಯಿದೆ. ಆಳು ಕಾಳು ಕಾರು ಮೋಟರು ಎಲ್ಲಾ ಇವೆ. ಒಬ್ಬ ಮಗನಿದ್ದಾನೆ. ಹೆಸರು ಸತ್ಯನಾರಾಯಣ. ಚಂದ್ರನ ಅಜ್ಜನ, ಅಂದರೆ ಜಮೀನ್ದಾರ್ ಜಗ್ಗಯ್ಯರೆಡ್ಡಿಯ ಅಪ್ಪನ ಹೆಸರಂತೆ ಅದು. ಮನೆಯಲ್ಲಿ ಎಲ್ಲರೂ ಅವನನ್ನು 'ಸತ್ಯ', 'ಸತ್ಯ' ಅಂತ ಕರೀತಾರೆ. ಈ ವರ್ಷ ಅವನನ್ನು ಒಂದು ಶ್ರೀಮಂತ ಇಂಗ್ಲಿಷ್ ಕಾನ್ವೆಂಟಿಗೆ ಸೇರಿಸಿದ್ದಾರೆ.

ಹಳ್ಳಿಯಲ್ಲಿನ ಚಂದ್ರನ ಜಮೀನು ಆಸ್ತಿಪಾಸ್ತಿ ಅವನ ಅಕ್ಕನ ಮಗನೊಬ್ಬ ನೋಡಿಕೊಳ್ಳುತ್ತಿದ್ದಾನೆ. ಚಂದ್ರ ಸಹ ಆಗಾಗ ಅಲ್ಲಿಗೆ ಹೋಗಿ ಬರ್ತಾನೆ. ಹೋದಾಗೊಮ್ಮೆ ತನ್ನ ಹೆತ್ತತಾಯಿಗೆ ಗುಟ್ಟಾಗಿ ಒಂದಷ್ಟು ಹಣ ತಲುಪಿಸುತ್ತಾನೆ. ಹೊಲೆಯರ ಉದ್ಧಾರಕ್ಕಾಗಿ ತನ್ನ ಕೈಲಾದ ಪ್ರಯತ್ನ ಮಾಡುತ್ತಿದ್ದಾನೆ. ಅವರಿಗಾಗಿ ಒಂದು ಬಾವಿ ತೋಡಿಸಿದ್ದಾನೆ, ಮನೆಗಳನ್ನು ಕಟ್ಟಿಕೊಳ್ಳಲು ಹಣ ಕೊಟ್ಟಿದ್ದಾನೆ. ಬಟ್ಟೆ, ಬರೆ ಕೊಟ್ಟಿದ್ದಾನೆ. ಇತ್ತೀಚೆಗೆ, ಊರ ಹೊರವಲಯದಲ್ಲಿರುವ ಶಾಲೆಯಲ್ಲಿನ ಹೊರ ಅಂಗಳದಲ್ಲಿ ಕೂತು ವಿದ್ಯೆ ಕಲಿಯುವ ಭಾಗ್ಯ ಹೊಲೆ ಮಕ್ಕಳಿಗೆ ಲಭಿಸಿದೆಯಂತೆ. ಸದ್ಯಕ್ಕೆ ಇನ್ನೇನು ಸಾಧ್ಯ?

ಚಂದ್ರ ಬ್ಯಾಂಕಿನಲ್ಲಿ ಈಗ ಆಫೀಸರ್ ಆಗಿದ್ದಾನೆ. ಅವನ ನೋಟದಲ್ಲಿ ಒಂದು ರೀತಿಯ ಖಾಲಿತನ ಕಂಡರೂ, ಮುಖ ಮೈ ಗುಂಡು ಗುಂಡಾಗಿ ಮಿರಿಮಿರಿ ಉಬ್ಬಿದೆ. ಒಂದಷ್ಟು ತುಳುಕು ಬೊಜ್ಜೂ ಬಂದಿದೆ. ಈಗೀಗ ಸಾಹಿತ್ಯ, ಸಮಾಜ, ಬಂಡಾಯ ಅಂತ ನನ್ನೊಂದಿಗೆ ಚರ್ಚಿಸಲು ಚಂದ್ರ ಬರುವುದು ತೀರಾ ಅಪರೂಪವಾಗಿದೆ. ಬಹುಶಃ ಬ್ಯಾಂಕು, ಯೂನಿಯನ್ನು, ಸಂಸಾರ ಇತ್ಯಾದಿ ನೂರೆಂಟು ತಾಪತ್ರಯಗಳಿರಬೇಕು.

★★★

ಹೀಗೆ ಆತ್ಮಹತ್ಯೆಯೋ, ಕೊಲೆಯೋ, ಒಟ್ಟಾರೆ ಚಂದ್ರ ಸತ್ತ. ಅವನ ಸಾವಿಗೆ, ಮಿಕ್ಕೆಲ್ಲ ಕಾರಣಗಳೊಂದಿಗೆ, ನಾನೂ ಕೊಂಚ ಮಟ್ಟಿಗೆ ಹೊಣೆಗಾರನಾದೆ. ಈಗ ಹೇಳಿ, ನಿಮಗೂ ಹಾಗನ್ನಿಸುತ್ತಾ, ಹಾಗೆಂದು, ನಾನು ನಿಜವಾಗಿ ಬದುಕಿದ್ದೇನೆಂಬ ಭ್ರಮೆ ನನಗೆ ಖಂಡಿತ ಇಲ್ಲ. ನಿಮಗೆ ಇದೆಯಾ?

✿